ಆ) ಅಭಿವೃದ್ಧಿ ಕಾರ್ಯಗಳಿಗೆ ಈ ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

2000–01	–	31207.46
2001–02	–	26313.16
2002–03	–	28701.35

ಇ) ಸಿಬ್ಬಂದಿ ನಿರ್ವಹಣೆ ವೆಚ್ಚ ಮತ್ತು ಇತರೆ ವೆಚ್ಚಗಳು ಈ ಕೆಳಗಿನಂತಿರುತ್ತದೆ:

(ರೂ. ಲಕ್ಷಗಳಲ್ಲಿ)

	ಸಿಬ್ಬಂದಿ	ಇತರೆ	ಒಟ್ಟು
2000–01	10034.01	14252.03	24286.04
2001–02	10976.58	10847.97	21824.55
2002–03	11050.86	23963.20	35014.06

ಬೆಂಗಳೂರು ಮಹಾನಗರ ಪಾಲಿಕೆಯ ಅಭಿವೃದ್ಧಿ ಕಾರ್ಯಗಳು

2590(2758) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಅಭಿವೃದ್ಧಿ ಕಾರ್ಯಗಳಿಗೆ ಯಾವ ಯಾವ ಉದ್ಯಮಿಗಳು ಹಾಗೂ ಇತರೇ ಸಂಘ–ಸಂಸ್ಥೆಗಳು ಸಹಾಯ ನೀಡಿರುತ್ತಾರೆ;

ಆ) ನೀಡಿದ್ದಲ್ಲಿ, ಸಹಾಯಧನದ ಮೊತ್ತ ಹಾಗೂ ಈ ಹಣದಿಂದ ಅಭಿವೃದ್ಧಿಪಡಿಸಿದ ಕಾರ್ಯ ಯೋಜನೆಗಳ ಪೂರ್ಣ ವಿವರ ನೀಡುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಬೆಂಗಳೂರು ಮಹಾನಗರ ಪಾಲಿಕೆ ಪಾಲುದಾರಿಕೆ ಆಧಾರದ ಮೇಲೆ ಬಿ.ಎ.ಟಿ.ಎಫ್.ನ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಈ ಸಹಯೋಗಕ್ಕೆ ಯಾವುದೇ ಆರ್ಥಿಕ ನೆರವು ನೀಡಿರುವುದಿಲ್ಲ. ಆದರೆ, ಈ ಕೆಳಕಂಡಂತೆ ವಸ್ತುಗಳ ರೂಪದಲ್ಲಿ ಸಹಾಯ ಮಾಡಿರುತ್ತಾರೆ:

1. ಸ್ವಚ್ಛ ಬೆಂಗಳೂರು ಕಾರ್ಯಕ್ರಮದಲ್ಲಿ 200 ತಳ್ಳುವ ಗಂಟೆ ಗಾಡಿಗಳು, 6 ಆಟೋ–ಟಿಪ್ಪರುಗಳು ಹಾಗೂ ಹೆಲ್ತ್ ನೆಟ್ ಅನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ಸಹಯೋಗದ ನಿಮಿತ್ತ ನೀಡಿರುತ್ತಾರೆ.

2. ಅದೇ ರೀತಿ ನಿರ್ಮಲ ಬೆಂಗಳೂರು ಶೌಚಾಲಯ ನಿರ್ಮಾಣದ ಅಡಿಯಲ್ಲಿ 100 ನಿರ್ಮಲ ಬೆಂಗಳೂರು ಶೌಚಾಲಯಗಳನ್ನು ನಿರ್ಮಿಸುವುದಾಗಿ ಬಿ.ಎ.ಟಿ.ಎಫ್. ತಿಳಿಸಿದ್ದು, ಈ ಪೈಕಿ 23 ನಿರ್ಮಲ ಬೆಂಗಳೂರು ಶೌಚಾಲಯಗಳನ್ನು ಪೂರ್ಣಗೊಳಿಸಿ, ಬೆಂಗಳೂರು ಶೌಚಾಲಯಗಳನ್ನು ಪೂರ್ಣಗೊಳಿಸಿ, ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿರುತ್ತಾರೆ. ಶ್ರೀಮತಿ ಸುಧಾಮೂರ್ತಿ ಯವರು ಈ ಶೌಚಾಲಯಗಳಿಗೆ ರೂ. 800.00 ಲಕ್ಷ ರೂ.ಗಳನ್ನು ನೀಡುವುದಾಗಿ ಆಶ್ವಾಸನೆ ನೀಡಿರುತ್ತಾರೆ.

3. ಇದರ ಜೊತೆಗೆ ಖಾಸಗಿ ಸಂಘ–ಸಂಸ್ಥೆಗಳು

9 – ಬುಲೇವಾರ್ಡುಗಳು,

43 – ವೃತ್ತಗಳು,

7 – ವಿಭಜಕಗಳು

3 – ಪಾದಚಾರಿ ರಸ್ತೆಗಳು ಮತ್ತು

60 – ಉದ್ಯಾನವನಗಳನ್ನು ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ತೆಗೆದುಕೊಂಡಿವೆ.

4. ಮೆ:ಪ್ರೆಸ್ಟೀಜ್ ಗ್ರೂಪ್ ಸಂಸ್ಥೆಯವರು ಬೆಂಗಳೂರು ಡೈರಿ ವೃತ್ತದಿಂದ ಮಡಿವಾಳ ಚೆಕ್ ಪೋಸ್ಟ್‌ರವರೆಗೆ ಪಾದಚಾರಿ ರಸ್ತೆಗಳಿಗೆ ಕಾಬಲ್ ಸ್ಟೋನ್, ಚರಂಡಿ ಮೇಲೆ ಪ್ರೀ – ಕ್ಯಾಸ್ಟ್ ಸ್ಲಾಬ್, ರಸ್ತೆ ಮಧ್ಯ ಭಾಗದ ವಿಭಜಕ ವಿದ್ಯುತ್ ಕಂಬಗಳು, ಟ್ರಾಫಿಕ್ ಸಿಗ್ನಲ್, ಲ್ಯಾಂಡ್ ಸ್ಕೇಪಿಂಗ್ ಮತ್ತು ನೀರಿನ ಚಿಲುಮೆ, ಇವುಗಳನ್ನು ರೂ. 1.35 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ.

ಆ) ಸಂಸ್ಥೆಗಳು ವಸ್ತು ರೂಪದಿಂದ ಸಹಾಯ ನೀಡಿರುವುದರಿಂದ ಸಹಾಯ ಧನದ ಮೊತ್ತದ ಪ್ರಶ್ನೆ ಬರುವುದಿಲ್ಲ.

ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಿಗೆ ನೀಡುವ ಅನುದಾನದ ವಿವರದ ಬಗ್ಗೆ

2591(2759) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03 ಮತ್ತು 2003–04 ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಿಗೆ ನೀಡಲಾಗುವ (ಮೇಯರ್ಸ್ ಫಂಡ್) ಅನುದಾನವೆಷ್ಟು;

ಆ) ಈ ಅನುದಾನವನ್ನು ಮೇಲ್ಕಂಡ ಸಾಲುಗಳಲ್ಲಿ ಯಾವ ಯಾವ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ ಹಾಗೂ ಯಾರು–ಯಾರಿಗೆ ನೀಡಲಾಗಿದೆ. ವಾರ್ಡ್‌ವಾರು ವಿವರ ನೀಡುವುದು;

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಬೆಂಗಳೂರು ಮಹಾನಗರ ಪಾಲಿಕೆಯ 2002–03 ಮತ್ತು 2003–04 ನೇ ಸಾಲಿನಲ್ಲಿ ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟ ಆರೋಗ್ಯ ಉದ್ದೇಶಗಳಿಗಾಗಿ ಪರಿಹಾರ ನೀಡುವ ಸಲುವಾಗಿ ಕ್ರಮವಾಗಿ ವರ್ಷಕ್ಕೆ ರೂ. 100 ಲಕ್ಷದಂತೆ ನಿಗಧಿಪಡಿಸಲಾಗಿದೆ.

ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಸಿವಿಲ್ ಕಾಮಗಾರಿಗಳಿಗಾಗಿ 2002–03 ಮತ್ತು 2003–04ನೇ ಸಾಲಿನ ಆಯವ್ಯಯದಲ್ಲಿ ಕ್ರಮವಾಗಿ ರೂ. 1,075 ಲಕ್ಷ ಮತ್ತು ರೂ. 1,025 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

ಆ) ಮೇಲಿನ ಸಾಲುಗಳಲ್ಲಿ ತಲಾ ರೂ. 100 ಲಕ್ಷಗಳ ಅನುದಾನದಲ್ಲಿ ಪೂಜ್ಯ ಮಹಾಪೌರರಿಗೆ ವೈದ್ಯಕೀಯ ಚಿಕಿತ್ಸೆ ಉದ್ದೇಶಗಳಿಗಾಗಿ ಪರಿಹಾರ ಕೋರಿ ಬಂದ ಮನವಿಗಳ ಆಧಾರದ ಮೇಲೆ ಸಹಾಯಧನ ನೀಡಲಾಗುತ್ತಿದೆ.

ಮೇಲಿನ ಸಾಲುಗಳಲ್ಲಿ ತಲಾ ರೂ. 100 ಲಕ್ಷಗಳ ಅನುದಾನದಲ್ಲಿ ಪೂಜ್ಯ ಮಹಾಪೌರರಿಗೆ ವೈದ್ಯಕೀಯ ಚಿಕಿತ್ಸೆ ಉದ್ದೇಶಗಳಿಗಾಗಿ ಪರಿಹಾರ ಕೋರಿ ಬಂದ ಮನವಿಗಳ ಆಧಾರದ ಮೇಲೆ ಸಹಾಯಧನ ನೀಡಲಾಗುತ್ತಿದೆ.

ಮೇಲಿನ ಸಾಲುಗಳಲ್ಲಿ ಪೂಜ್ಯ ಮಹಾಪೌರರು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಆಜ್ಞೆಮಾಡಿದ ಕಾಮಗಾರಿಗಳ ಸಂಬಂಧ 2002–03 ನೇ ಸಾಲಿನಲ್ಲಿ ಒಟ್ಟು ರೂ. 1,074.32 ಲಕ್ಷಗಳನ್ನು